MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | FRIDAY | 4-11-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಬೇಡಿಕೆ ಕಾಳಜಿಯಿಂದ ಮಲೇಶಿಯನ್ ಪಾಮೆಣ್ಣೆ ದರ ಇಳಿಕೆ

ನಿರಂತರ 3 ದಿನಗಳಿಂದ ಹೆಚ್ಚಳ ಕಂಡು 12 ವಾರಗಳ ಗರಿಷ್ಠ ಮಟ್ಟ ತಲುಪಿದ್ದ ಮಲೇಶಿಯನ್ ಪಾಮೆಣ್ಣೆ ದರ ಹೆಚ್ಚಿನ ದರದಲ್ಲಿ ಬೇಡಿಕೆ ಇಳಿಕೆಯ ಕಾಳಜಿಯಿಂದ 1.41 ಶೇಕಡಾ ಇಳಿಕೆ ದಾಖಲಿಸಿ (62 ರಿಂಗಿಟ್ಸ್ ಇಳಿಕೆ 4336 ರಿಂಗಿಟ್ಸ್ $ 914.29) ಆಗಿದೆ. ಹೆಚ್ಚಳವಾಗುತ್ತಿರುವ ಇಂಡೋನೇಶಿಯಾ ದಾಸ್ತಾನಿನಿಂದ ಸ್ಪರ್ಧೆ ಹಾಗೂ ರಷ್ಯಾ ಮತ್ತೆ ಕಪ್ಪು ಸಮುದ್ರ ಪ್ರದೇಶದಲ್ಲಿ ಸಾಗುವ ಸರಕು ಸಾಗಾಣೀಕಾ ಹಡಗುಗಳಿಗೆ ಸರಕಾರ ಖಾತ್ರಿ ಪಡಿಸಲು ಪುನರಾಂಭಿಸುವಲ್ಲಿ ಭಾಗಿಯಾಗಲಿರುವಿದರಿಂದ ದರ ಇಳಿಕೆ ಕಂಡಿದೆಯೆನ್ನಲಾಗಿದೆ.

## ಜಾಗತಿಕ ಪಾಮೆಣ್ಣೆ ಉತ್ಪಾದನೆ 2022-23 ರಲ್ಲಿ 2.9 ಮಿಲಿಯನ್ ಟನ್ ಹೆಚ್ಚಳ ಸಾಧ್ಯತೆ

ಜಾಗತಿಕ ಪಾಮೆಣ್ಣೆ ಉತ್ಪಾದನೆ 2022-23 ರಲ್ಲಿ 2.9 ಮಿಲಿಯನ್ ಟನ್ ಹೆಚ್ಚಳ ಸಾಧ್ಯತೆಯನ್ನು ಪ್ರಮುಖ ಕೈಗಾರಿಕಾ ವಿಶ್ಲೇಷಕ ಥಾಮಸ್ ಮೈಲ್ಕೆ ಕಾನ್ಫರೆನ್ಸ್‌ನಲ್ಲಿ ವ್ಯಕ್ತಪಡಿಸಿದ್ದಾರೆನ್ನಲಾಗಿದೆ. ಜಾಗತಿಕ ಪಾಮೆಣ್ಣೆ ಉತ್ಪಾದನೆ 2022 ರಲ್ಲಿ 78.3 ಮಿಲಿಯನ್ ಟನ್‌ಗಳಾಗಬಹುದೆಂದು ಅವರು ಅಂದಾಜಿಸಿದ್ದಾರೆನ್ನಲಾಗಿದೆ.

## ಪ್ರಥಮ ತಿಂಗಳ ಸಕ್ಕರೆ ಉತ್ಪಾದನೆ 14.73 ಶೇಕಡಾ ಇಳಿಕೆ

ಅಕ್ಟೋಬರ್ 2022 ರಲ್ಲಿ 4.05 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿದೆಯೆನ್ನಲಾಗಿದ್ದು, ಹಿಂದಿನ ವರ್ಷದಲ್ಲಿ 4.75 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿತ್ತೆನ್ನಲಾಗಿದೆ. ದೇಶೀ ಸಹಕಾರಿ ಸಕ್ಕರೆ ಕೈಗಾರಿಕಾ ಒಕ್ಕೂಟ 2022-23 ರಲ್ಲಿ ಭಾರತದ ಸಕ್ಕರೆ ಉತ್ಪಾದನೆ 36 ಮಿಲಿಯನ್ ಟನ್‌ಗಳಾಗಬಹುದೆಂದು ಅಂದಾಜಿಸಿದೆ. ಅಕ್ಟೋಬರ್ ನಲ್ಲಿ ಕರ್ನಾಟಕದ ಕೈಗಾರಿಕೆಗಳು 2.80 ಲಕ್ಷ ಟನ್ ಸಕ್ಕರೆ ಉತ್ಪಾದಿಸಿದ್ದು, ಹಿಂದಿನ ವರ್ಷ ಇದೇ ಅವಧಿಯಲ್ಲಿ 3.10 ಲಕ್ಷ ಟನ್ ಉತ್ಪಾದಿಸಿತ್ತೆನ್ನಲಾಗಿದೆ. ಹಿಂದಿನ ವರ್ಷ ಈ ಅವಧಿಯಲ್ಲಿ 1.40 ಲಕ್ಷ ಟನ್ ಉತ್ಪಾದಿಸಿದ್ದ ಮಹಾರಾಷ್ಟ್ರ ಈ ವರ್ಷ ಅಕ್ಟೋಬರ್‌ನಲ್ಲಿ 80000 ಟನ್ ಸಕ್ಕರೆ ಉತ್ಪಾದಿಸಿದೆಯೆನ್ನಲಾಗಿದ್ದು, ಆಗಿನ ವರ್ಷ 160 ಮಿಲ್‌ಗಳು ಕಾರ್ಯಾರಂಭಿಸಿದ್ದರೆ, ಈ ವರ್ಷ 134 ಮಿಲ್‌ಗಳ ಕಾರ್ಯಾರಂಭ ಮಾಡಿವೆಯೆನ್ನಲಾಗಿದೆ.

## ಸರಕಾರಿ ಭತ್ತ ಖರೀದಿ 12 ಶೇಕಡಾ ಹೆಚ್ಚಳ – 170.53 ಲಕ್ಷ ಟನ್ ಗಳು

2022 ಅಕ್ಟೋಬರ್ ತಿಂಗಳ ಅಂತ್ಯದವರೆಗೆ ಸರಕಾರಿ ಭತ್ತ ಖರೀದಿ 170.53 ಲಕ್ಷ ಟನ್ ಗಳಾಗಿವೆಯೆನ್ನಲಾಗಿದ್ದು, ಹಿಂದಿನ ವರ್ಷ ಇದೇ ಅವಧಿಯ ಖರೀದಿಗಿಂತ 12 ಶೇಕಡಾ ಹೆಚ್ಚಳ ಕಾಯ್ದು ಕೊಂಡಿದೆಯೆನ್ನಲಾಗಿದೆ.

## ರಾಬಿ ಗೋಧಿ ಬಿತ್ತನೆ 59 ಶೇಕಡಾ ಹೆಚ್ಚಳ

ಇದುವರೆಗೆ ದೇಶದಲ್ಲಿ 54000 ಹೆಕ್ಟೇರ್ ಪ್ರದೇಶದಲ್ಲಿ ಗೋಧಿ ಬಿತ್ತನೆಯಾಗಿದೆಯೆನ್ನಲಾಗಿದ್ದು, ಹಿಂದಿನ ವರ್ಷ ಇದೇ ಅವಧಿಯಲ್ಲಿ 34000 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತೆನ್ನಲಾಗಿದೆ.

## ರಾಬಿ ಕಡ್ಲೆ ಬಿತ್ತನೆ ಪ್ರದೇಶ ಹೆಚ್ಚಳ

ಒಟ್ಟು ಇದುವರೆಗೆ 8.82 ಹೆಕ್ಟೇರ್ ಪ್ರದೇಶದಲ್ಲಿ ರಾಬಿ ಬೇಳೆಕಾಳು ಬಿತ್ತನೆಯಾಗಿದ್ದು, ಅದರಲ್ಲಿ 6.96 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಡ್ಲೆ ಬಿತ್ತನೆಯಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 5.91 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಡ್ಲೆ ಬಿತ್ತನೆಯಾಗಿತ್ತೆನ್ನಲಾಗಿದೆ.

## ರಾಬಿ ತೈಲಬೀಜಗಳ ಬಿತ್ತನೆ ಗಣನೀಯ ಹೆಚ್ಚಳ

ಈ ವರ್ಷ ರಾಬಿ ತೈಲಬೀಜ ಬಿತ್ತನೆ ಇದುವರೆಗೆ 19.69 ಲಕ್ಷ ಹೆಕ್ಟೇರ್ ಪ್ರದೇಶ ತಲುಪಿದ್ದು, ಹಿಂದಿನ ವರ್ಷ ಈ ಅವಧಿಯಲ್ಲಿ 15.13 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತೆನ್ನಲಾಗಿದೆ. ಇದರಲ್ಲಿ ಈ ವರ್ಷ 18.99 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸಾಸಿವೆ ಬಿತ್ತನೆಯಾಗಿದೆಯೆನ್ನಲಾಗಿದ್ದು, ಹಿಂದಿನ ವರ್ಷ ಇದೇ ಅವಧಿಯ 14.21 ಲಕ್ಷ ಹೆಕ್ಟೇರ್ ಗಿಂತ ಗಣನೀಯ ಹೆಚ್ಚಳ ಕಂಡಿದೆ.

## ಕರ್ನಾಟಕದಲ್ಲಿ ಇದುವರೆಗೆ 11158 ಟನ್ ಹೆಸರುಕಾಳು ಖರೀದಿ

ಕರ್ನಾಟಕದಲ್ಲಿ ಈ ವರ್ಷ ಇದುವರೆಗೆ NAFED 11158 ಟನ್ ಹೆಸರುಕಾಳು ಖರೀದಿಸಿದೆಯೆನ್ನಲಾಗಿದೆ. ಧಾರವಾಢದಲ್ಲಿ 1462 ಟನ್, ಗದಗದಲ್ಲಿ 7034 ಟನ್, ಬೆಳಗಾವಿಯಲ್ಲಿ 813 ಟನ್ ಹಾಗೂ ಬೀದರ್‌ನಲ್ಲಿ 31 ಟನ್ ಗಳ ಖರೀದಿಯಾಗಿದೆಯೆನ್ನಲಾಗಿದೆ. ಈ ವರ್ಷ 1.75 ಮಿಲಿಯನ್ ಟನ್ ಹೆಸರುಕಾಳು ಉತ್ಪಾದನೆಯಾಗಿದೆಯೆನ್ನಲಾಗಿದೆ. ರಾಜಸ್ಥಾನದಲ್ಲಿ ಸರಕಾರದ ವತಿಯಿಂದ ಖರೀದಿ ಆರಂಭವಾಗಿದೆಯೆನ್ನಲಾಗಿದ್ದು, ಬಹುತೇಕ ಪ್ರದೇಶಗಳಲ್ಲಿ ಮಾರುಕಟ್ಟೆ ದರ ಕನಿಷ್ಠ ಬೆಂಬಲ ಬೆಲೆಯಾದ 7755 ಕ್ಕಿಂತ ಕಡಿಮೆಯಿದೆಯೆನ್ನಲಾಗಿದೆ.